ಕನ್ನಡಪ್ರಭ
www.kannadaprabha.com
e-mail:sapthahika@gmail.com
ಭಾನುವಾರ
31 ಜುಲೈ 2011

ವಿ ರಾ ಮ ದ ಒ ದಿ ಗೊಂ ದು ಆ ರಾ ಮ ತಾ ಣ

# ಸಾಪ್ತಾಹಿಕ ಪ್ರಭ

ನಿನ್ನ ನುಡಿಯು ಹೊನ್ನ ನುಡಿಯು

# ರಾಜ್ ನೀತಿ





ಸಂಗ್ರಹ: ಎಸ್. ಜಗನ್ನಾಥರಾವ್ ಬಹುಳೆ

**10 ವರ್ಷಗಳ ಹಿಂದೆ ಡಾ. ರಾಜ್‌ಕುಮಾರ್‌ರನ್ನು ವೀರಪ್ಪನ್ ಅಪಹರಿಸಿದ್ದ ದಿನ ಇದು (ಜುಲೈ 31). ಕೊನೆಗೆ ಆ ದೇವರೇ ಅಭಿಮಾನಿಗಳ ದೇವರನ್ನು ಅಪಹರಿಸಿದರೂ, ರಾಜಣ್ಣ ಹರಿಸಿದ ವಾಗ್ಧಾರೆ ನಮ್ಮನ್ನು ಸಲಹುತ್ತಲೇ ಇದೆ. ಇಲ್ಲಿದೆ ಅಂಥಹ ಜೇನಿನ ಹನಿ, ಅವರದ್ದೇ ಸಿನಿಮಾಗಳಿಂದ. ಈ ಪ್ರಯೋಗ ಮತ್ತು ಸುಯೋಗ 'ಸಾಪ್ತಾಹಿಕ ಪ್ರಭದಲ್ಲಿ ಮಾತ್ರ'.**

## ಚಲಿಸುವ ಮೋಡಗಳು

(ರಾಜ್ – ಕುಣಿಗಲ್ ರಾಮನಾಥ್)
(ವಕೀಲರಾದ ಮೋಹನ್ ಬಳಿ ಕೇಸ್ ದಾಖಲಿಸಲು ಬಂದ ಫಿರ್ಯಾದುದಾರ)
**ಫಿರ್ಯಾದಿ:** ಸ್ವಾಮಿ ಎಷ್ಟು ಲಕ್ಷ ಖರ್ಚಾದ್ರೂ ಪರವಾ ಇಲ್ಲ ಆ ಹತ್ತಡಿ ಭೂಮಿ ನನ್ನ ಕಡೆ ಆಗ್ಲೆಬೇಕು.
**ಮೋಹನ್:** ಅಲ್ರಿ ಪಟೇಲರೆ, ಎಷ್ಟು ಲಕ್ಷ ಯಾಕೆ, ಒಂದು ಲಕ್ಷಕ್ಕೇ ಮೂರೆಕರೆ ಗದ್ದೆ ಬರುತ್ತಲ್ರಿ. ಪುರಂದರ ದಾಸರ ಕೀರ್ತನೆಯನ್ನು ಕೇಳಿದೀರಾ – ಯಾರು ಹಿತವರು ನಿನಗೆ ಈ ಮೂವರೊಳಗೆ ನಾರಿಯೊ, ಧಾರುಣಿಯೊ, ಸಿರಿಯೊ ಅಂತ ಹೇಳಿದಾರೆ. ಪ್ರಪಂಚಾನೇ ಗೆಲ್ಲ ಬೇಕು ಅಂತ ಹೋದ ಅಲೆಗ್ಸಾಂಡರ್ ಎಲ್ಲಿದಾನೆ ಈವತ್ತು? ಉತ್ತರ ಇಂಡಿಯಾನೇ ಆಳಿದ ಹರ್ಷ ಏನ್ ತಗೊಂಡ್ ಹೋದ ಆವತ್ತು. ಈ ಕೋಟೆ ನಮ್ಮದು, ಈ ಸಿಂಹಾಸನ ನಮ್ಮದು, ಈ ರಾಜ್ಯ ನಮ್ಮದು ಅಂತ ಕತ್ತಿಗಳನ್ನು ಹಿಡಿದು ಚಂಡಾಡಿದರಲ್ಲ ಆ ರಾಜರು ಸತ್ತಾಗ ಏನ್ರೀ ತಗೊಂಡು ಹೋದ್ರು. ಒಡಹುಟ್ಟಿದ ತಮ್ಮ ಒಂದು ಹಿಡಿ ಅನ್ನ ಜಾಸ್ತಿ ತಿಂದರೆ ಅದಕ್ಕಾಗಿ ಕೋರ್ಟ್ ಮೆಟ್ಟಿಲು ಹತ್ತಬೇಕಾ? ಅಣ್ಣ ತಮ್ಮಂದಿರ ಜಗಳದಲ್ಲಿ ಕುರುಕ್ಷೇತ್ರ ನಡೆದಿದ್ದು, ನಿಮ್ಮಿಬ್ಬರ ಜಗಳದಿಂದ ಲಾಭ ಯಾರಿಗಪ್ಪ ಅಂದ್ರೆ ನಮ್ಮಂಥ ಲಾಯರ್‌ಗಳಿಗೆ. ಅದರಿಂದ ನನ್ನ ಮಾತು ಕೇಳಿ ಕೇಸ್ ವಾಪಸ್ ತಗೊಳ್ಳಿ.

## ಆಕಸ್ಮಿಕ

(ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಹಾದಿ ಜಗಳದವರ ಬಳಿ ಬಂದ ಮೂರ್ತಿ)
ಎಸ್‌ಐ. ಮೂರ್ತಿ: ಏನೆಂದೆ ನೀನವನಿಗೆ ಏನೆಂದೆ (ಕೋಪದಿಂದ)
ದಾರಿಹೋಕ: ಸೂಳೆ ಮಗನೆ ಅಂದೆ..
ಎಸ್‌ಐ. ಮೂರ್ತಿ: (ಆತನ ಕೆನ್ನೆಗೆ ತೆಗೆದು ಬಾರಿಸಿದ ಸಿಟ್ಟಿನಿಂದಲೇ) ಇನ್ನೊಂದು ಸಲ ನಿನ್ನ ಬಾಯಲ್ಲಿ ಆ ಶಬ್ದ ಬಂದರೆ ಹೂತಾಕ್ ಬಿಡ್ತೀನಿ ಭಡವ... ಹೆಣ್ಣನ್ನು ಸೂಳೆ ಮಾಡಿದವರು ಯಾರು? ನಿನ್ನಂಥ ಚಂಡಾಲ ಗಂಡಸರು. ಹೆಣ್ಣು ಜನ್ಮ ಕೊಡೋ ತಾಯಿ ಕಣೋ, ಮೊದಲು ಅವಳಿಗೆ ಗೌರವ ಕೊಡೋದನ್ನ ಕಲಿತುಕೊಳ್ಳಿ ಉದ್ಧಾರ ಆಗ್ತೀರಿ.



## ಹೊಸ ಬೆಳಕು

(ರಾಜ್–ಜಾನಕಮ್ಮ)
(ಬೆಳಗಿನ ಜಾವ ಹಾಲು ಹಾಕಿಸಿಕೊಳ್ಳುವ ಅಕ್ಕನಿಗೆ)
ರವಿ: ತಾನು ಮಾಡೋದು ಉತ್ತಮ, ಮಗ ಮಾಡೋದು ಮಧ್ಯಮ, ಆಳು ಮಾಡೋದು ಹಾಳು.
ಯಾವಾಗ್ಲೂ ನಮ್ಮ ನಮ್ಮ ಕೆಲಸವನ್ನು ನಾವೇ ಮಾಡ್ಕೊಬೇಕು. ಆವಾಗ್ಲೆ ನಾವು ಜಾಣರಾಗೋದು.

## ಪರಶುರಾಮ್

(ಕನ್ನಡ ರಾಜ್ಯೋತ್ಸವದ ಕುರಿತು ಕಿರು ಭಾಷಣ. ಮೇಜರ್ ಪರಶುರಾಮ್ ಆಗಿ)
ನಮ್ಮ ಆತ್ಮೀಯ ಬಂಧುಗಳೇ ಇವತ್ತು ಕನ್ನಡ ರಾಜ್ಯೋತ್ಸವ, ದೊಡ್ಡವರೆಲ್ಲ ಹೇಳ್ತಾರೆ, ತಾಯಿಗಿಂತ ದೇವರಿಲ್ಲ ಅಂತ. ಅದನ್ನು ಬಿಟ್ರೆ ಎರಡನೆಯದಾಗಿ ನಾವು ಪ್ರೀತಿಸೋದು ಯಾವುದು? ನಮ್ಮ ಮಾತೃ ಭಾಷೆ, ಅದು ನಮಗೆ ತಾಯಿ ಇದ್ದ ಹಾಗೆ. ಈ ಸಂದರ್ಭದಲ್ಲಿ ನಾನು ಎರಡು ಮಾತು ಹೇಳೋದಿಕ್ಕೆ ಇಷ್ಟಪಡ್ತೀನಿ. ನಾವುಗಳು ಯಾವಾಗಲೂ ಪರಾವಲಂಬಿಗಳಾಗಿರಬಾರದು. ಅಂದರೆ ಬೇರೆಯವರ ಸಹಾಯದಿಂದ ಬದುಕಬೇಕು ಅನ್ನೋ ಆಸೆಯನ್ನು ಬಿಟ್ಟುಬಿಡಬೇಕು. ನಮ್ಮ ಕಾಲ ಮೇಲೆ ನಾವು ನಿಂತುಕೊಳ್ಳಬೇಕು. ನಮ್ಮ ಸ್ವಂತ ದುಡಿಮೆಯಿಂದ ನಾವು ಬದುಕಬೇಕು. ಕಂಡವರ ಕಾಸಿಗೆ ಆಸೆ ಪಡಬಾರದು. ಆ ಕಾಸನ್ನು ದುರ್ವಾಸನೆ ಅಂತ ತಿಳಿದುಕೊಳ್ಳಬೇಕು. ಹಣದಲ್ಲಿ ನಾವು ಶ್ರೀಮಂತಿಕೆಯನ್ನು ನಾವು ಕಾಣೋದಿಕ್ಕಾಗೋದಿಲ್ಲ. ಗುಣದಲ್ಲಿ ಕಾಣಬೇಕು. ಆ ಭಾವನೆ ನಮ್ಮಲ್ಲಿ ಯಾವಾಗಲೂ ಶಾಶ್ವತವಾಗಿರುತ್ತೊ ಆವಾಗ ನಮ್ಮಂಥ ಶ್ರೀಮಂತರು ಈ ಪ್ರಪಂಚದಲ್ಲಿ ಯಾರೂ ಇರೋದಿಲ್ಲ. ಈ ಸತ್ಯವನ್ನು ನಾವೆಲ್ಲರೂ ತಿಳಿದುಕೊಂಡು ಬದುಕಬೇಕು ಎಂದೇ ಈ ಕನ್ನಡ ರಾಜ್ಯೋತ್ಸವದ ಅರ್ಥ.
ಜೈ ಕರ್ನಾಟಕ ಮಾತೆ.

## ಹೊಸಬೆಳಕು

(ರಾಜ್ ಮದುವೆ ಮನೆಯಲ್ಲಿ ವರದಕ್ಷಿಣೆ ವಿಚಾರ ಮಾತನಾಡುತ್ತಾ)
ರವಿ: ಪ್ರಪಂಚದಲ್ಲಿ ಹಣ ಒಂದಕ್ಕೆ ಪ್ರಾಧಾನ್ಯತೆ ಇದ್ದಿದ್ದರೆ, ಮನುಷ್ಯತ್ವಕ್ಕೆ, ಗುಣಕ್ಕೆ ಬೆಲೇನೇ ಇರ್‍ತಿರಲಿಲ್ಲ.

ಹಣಾನ ಯಾರ್ ಬೇಕಾದ್ರೂ ಸಂಪಾದನೆ ಮಾಡಬಹುದು, ಯಾವ ರೀತಿ ಬೇಕಾದ್ರೂ ಸಂಪಾದನೆ ಮಾಡಬಹುದು, ಯಾವ ರೂಪದಲ್ಲಾದರೂ ಸಂಪಾದನೆ ಮಾಡಬಹುದು, ಆದರೆ ಕಳೆದು ಹೋದ ಗೌರವವನ್ನು ಮತ್ತೆ ಸಂಪಾದನೆ ಮಾಡೋದಿಕ್ಕಾಗೋದಿಲ್ಲ. ಕೇವಲ ಒಂದು ಹೆಣ್ಣಿನ ದುಡ್ಡಿನಿಂದ ಬದುಕಬೇಕು ಅನ್ನುವವರನ್ನು ಮನುಷ್ಯ ಅನ್ನೋದಿಲ್ಲ.
ಗೆಳೆಯ: ಏನಂತಾರೆ...
ರವಿ: ನಾಮರ್ದಾ ಅಂತಾರೆ...



## ಕಾಮನಬಿಲ್ಲು

(ರಾಜ್–ತೂಗುದೀಪ)
(ಹಳ್ಳಿಗೌಡನೊಂದಿಗೆ ಸೂರಿ ಸಂಭಾಷಣೆ)
ಗೌಡ: ನಾವು ಈ ಊರಿನ ಹಿರಿಯರು ಇನ್ನು ಈ ಊರಿನಲ್ಲಿ ಜಾತಿ ನೀತಿ ರೀತಿ ನಿಯಮ ಕಟ್ಲೆ ಅಂತ ಉಳಿಸಿಕೊಂಡಿದ್ದೀವಿ. (ಕೇರಿ ಹುಡುಗನನ್ನು ಹೊಡೆದದ್ದನ್ನು ಸಮರ್ಥಿಸಿಕೊಳ್ಳುತ್ತಾ)
ಸೂರಿ: ರೀ ಗೌಡ್ರೆ... ಡಿ.ವಿ. ಗುಂಡಪ್ಪನವರು ಅಂತ ಬಹಳ ದೊಡ್ಡ ವ್ಯಕ್ತಿ ಏನ್ ಹೇಳಿದ್ದಾರೆ ಗೊತ್ತಾ. ಜಾತಿ ಬರಿ ಹುಟ್ಟಿನಿಂದ ಬರುವುದಿಲ್ಲ. ಮೇಲಾದ ನಡತೆಯಿಂದ ಮೇಲಹುದು ಜಾತಿಯು, ಕೀಳಾದ ನಡತೆಯಿಂದ ಕೀಳಹುದು ಜಾತಿಯು.
ಗೌಡ: ಇದೆಲ್ಲ ಪುಸ್ತಕದ ಬದನೆಕಾಯಿ, ನಾಲ್ಕಕ್ಷರ ಕಲಿತಾಕ್ಷಣ ಮಾದಿಗನೂ ಒಂದೇ ಮಾಧವರಾಯರೂ ಒಂದೇ ಆಗ್ತಾನಾ?
ಸೂರಿ: ಯಾಕ್ ಆಗೋದಿಲ್ಲ. ಅವರ ಮೈನಲ್ಲಿ ಹರಿಯೋದು ರಕ್ತಾನೆ, ನಮ್ಮ ಮೈನಲ್ಲಿ ಹರಿಯೋದು ರಕ್ತಾನೆ ಜಾಡಿಸಿ ಒದ್ದ ಅಂದ್ರೆ ಅವರು ಅಮ್ಮ ಅಂತ ಕೂಗುತ್ತಾರೆ. ನೀವು ಅಮ್ಮ ಅಂತ ಅರಚಿಕೊಳ್ತೀರಿ.
ಗೌಡ: ಏನು ನಾಲಿಗೆ ಉದ್ದ ಹರಿ ಬಿಡ್ತಾ ಇದ್ದೀಯಾ. ಹಳ್ಳಿಗೆ ಹಿರಿಯ ನಾನು.
ಸೂರಿ: ಕತ್ತೆ ಕಿರುಚಿದ್ರೆ, ಕತ್ತೆ ಅಂತ ಗೊತ್ತಾಗುತ್ತಾ ಅದರ ಆಕಾರ ನೋಡಿದ್ರೆ, ಗೊತ್ತಾಗಲ್ವ.



## ಗುರಿ

(ರಾಜ್–ಬ್ರಹ್ಮಾವರ್)
(ಪೊಲೀಸ್ ಇನ್ಸ್‌ಪೆಕ್ಟರ್ ಕಾಳಿಚರಣ್ (ರಾಜ್) ಶಾಲಾ ಮಾಸ್ತರ್ ತಂದೆ (ಸದಾಶಿವ ಬ್ರಹ್ಮಾವರ್) ಯೊಡನೆ)
ಕಾಳಿಚರಣ್: ಏನಪ್ಪ ಸರ್ಕಾರಾನೇ ನಿನಗೋಸ್ಕರ ದುಡೀತಾ ಇರೋ ಹಾಗಿದೆ. ಪೊಲೀಸ್‌ನವನು ನೀನು ನಡೆದು ಬರುವುದಕ್ಕಾಗಿ ಸೆಲ್ಯೂಟ್ ಹೊಡೆದು ಟ್ರಾಫಿಕ್ ಬಂದ್ ಮಾಡ್‌ಬಿಟ್ಟ.
ತಂದೆ: (ನಗುತ್ತಾ) ಅವನು ನನ್ನ ಸ್ಟೂಡೆಂ–ಟ್. ಗುರುವಿಗೆ ಮರ್ಯಾದೆ ತೋರಿಸುತ್ತಿದ್ದಾನೆ ಅಷ್ಟೆ.
ಕಾಳಿ: ಸಿ.ಐ.ಡಿ. ಆಫೀಸ್‌ನಲ್ಲಿ ನಿನ್ನ ಸ್ಟೂಡೆಂಟು, ಎಲ್.ಐ.ಸಿ. ಆಫೀಸ್‌ನಲ್ಲಿ ನಿನ್ನ ಸ್ಟೂಡೆಂಟು, ಕೆ.ಇ.ಬಿ.ನಲ್ಲಿ, ಕೆ.ಎಸ್.ಆರ್.ಟಿ.ಸಿ.ಯಲ್ಲಿ ನಿನ್ನ ಸ್ಟೂಡೆಂಟು, ಏನ್ ಅದೃಷ್ಟನಪ್ಪ ನಿಂದು. ನೀನೆಲ್ಲಿ ಕಾಲಿಟ್ಟರೆ ಅಲ್ಲಿ ರೆಡಿಯಾಗಿರ್‍ತಾರೆ ಜನ ಕೈ ಮುಗಿಯೋದಿಕ್ಕೆ.
ತಂದೆ: ಪವಿತ್ರವಾದ ಈ ಉದ್ಯೋಗಾನೆ ಅಂಥದ್ದು ಕಣಪ್ಪ.
ಕಾಳಿ: ಮೇಷ್ಟ್ರು ಕೆಲಸಕ್ಕೆ ಇಷ್ಟು ಗೌರವ ಇದೆ ಅಂತ ಮೊದಲೇ ಗೊತ್ತಿದ್ರೆ ನಾನೂ ಮೇಷ್ಟ್ರು ಕೆಲಸಕ್ಕೆ ಸೇರಿಬಿಡ್ತಿದ್ದೆ ಅಪ್ಪ.
ತಂದೆ: ಗೌರವ ಅನ್ನೋದು ಉದ್ಯೋಗದಲ್ಲಿಲ್ಲಪ್ಪ. ನಮ್ಮ ನಡವಳಿಕೆಯಿಂದ ಸಂಪಾದಿಸಿಕೊಳ್ಳಬೇಕಾದ ಐಶ್ವರ್ಯ ಅದು. ನ್ಯಾಯ, ನೀತಿ, ಧರ್ಮ ಹಾದಿಯಲ್ಲಿ ನಡೆಯುವುದನ್ನು ಗುರಿಯಾಗಿಸಿಕೊಂಡೆಯಾದರೆ, ನೀನು ನನಗಿಂತ ಹೆಚ್ಚಿನ ಗೌರವವನ್ನು ಸಂಪಾದಿಸಬಹುದು.

6ನೇ ಪುಟಕ್ಕೆ

# ಸೂರ್ಯ ನಮಸ್ಕಾರ
## ಹಂದೆಯ ಬಾಳಿನ ಬೆಳಕಾಗಿ

**ಕುಂದಾಪುರದ ಹರೀಶ್ ಹಂದೆ ಅವರಿಗೆ ಬೆಳಕಿನ ದಾರಿ ತೋರಿದ್ದಕ್ಕಾಗಿ ಮ್ಯಾಗ್ಸೆಸೆ ಬಂದಿದೆ. ಕನ್ನಡದ ಹಂದೆ ಕನ್ನಡದ ಕಣ್ಣಾಗಿರುವ ಕಥೆ ಇಲ್ಲಿದೆ. ಸೂರ್ಯನನ್ನು ಕಂಗಳಿಗೆ ತಂದ ಅವರಿಗಿದು ಅಕ್ಷರ ಸಲಾಂ.**

• ಕೀರ್ತಿ ಕೋಲ್ಗಾರ್

ಗ್ಲಾಕೋಮಾ ಬೇನೆಯಿಂದ ಕಣ್ಣುಗುಡ್ಡೆಯೆಲ್ಲ ಕಳಚಿ ಬೀಳುತ್ತವೇನೋ ಎಂಬ ಆತಂಕದಲ್ಲಿದ್ದಳು ಭೂಮಿಗೌಡ. ಲೋಕಕ್ಕೆಲ್ಲ 24 ಗಂಟೆ, ಈಕೆಯ ದೃಷ್ಟಿಗೆ ಕೇವಲ 12 ಗಂಟೆ. ರಾತ್ರಿಯ ಬೆಳಕಿರಲಿ, ಮಂದ ಬೆಳಕಲ್ಲೂ ಆಕೆಯ ದೃಷ್ಟಿ ಮೂರಡಿಗಿಂತ ಮುಂದೆ ಹೋಗದು. ಬತ್ತಿ ಹೋದ ಈ ಬದುಕಲ್ಲಿ ಬಳಿಯಿದ್ದಿದ್ದು ಬರೀ ಸೀಮೆಎಣ್ಣೆಯ ಲಾಂದ್ರ. ದೃಷ್ಟಿಯ ಬಲಹೀನತೆಯಿಂದಾಗಿ ಅದನ್ನೂ ನಂಬುವ ಹಾಗಿಲ್ಲ. ಹೀಗಾಗಿ, ಕತ್ತಲಾಯ್ತೆಂದರೆ ಹೊರಗೆ ಕಾಲಿಡುವುದಕ್ಕೆ ಒಂಥರ ಹೆದರಿಕೆ. ಜತೆಗೆ, ಹೆಬ್ಬಾವುಗಳ ಕಾಟ. ಮನೆಯ ಸುತ್ತ ಹುಲಿಗಳದ್ದೂ ಮಾಮೂಲಿ ಪೆರೇಡ್‌ನ ಭಯ ಮತ್ತೊಂದೆಡೆ.
ಆಗ ಆತಂಕದಲ್ಲೇ ಬೆವರಿದ್ದಳು ಭೂಮಿಗೌಡ. ಈಗ ಅದೇ ಮುಖದಲ್ಲಿ 100 ವ್ಯಾಟ್ ಸ್ಮೈಲ್ ಕಾಣ್ತಿದೆ.



5ನೇ ಪುಟಕ್ಕೆ

ಕುಂವೀ ಬರೀತಿದ್ದಾರೆ ರಾಜಕೀಯ ಕಾದಂಬರಿ



ಇದು ಸಾಪ್ತಾಹಿಕ ಪ್ರಭದಲ್ಲಿ ಮಾತ್ರ

# ಛಿಬ್ರಿಯಾ

**'ಛಿಬ್ರಿಯಾ' ಕಾಲರಾದಂಥ ಸಾಂಕ್ರಾಮಿಕ ವ್ಯಾಧಿಯ ರೋಗಾಣುವಿನ ಹೆಸರು. ಸಮಕಾಲೀನ ರಾಜಕೀಯ ವ್ಯವಸ್ಥೆ, ಪ್ರಜಾಪ್ರಭುತ್ವವನ್ನೇ ಅಪಹರಿಸಲೆತ್ನಿಸುವಷ್ಟು ಅಪಾಯಕಾರಿಯಾಗಿ ಬೆಳೆದಿರುವ ಗಣಿಮಾಫಿಯಾ. ಇಂಥ ಹಲವು ವಿವರಗಳ ಹಿನ್ನೆಲೆಯಲ್ಲಿ ಕುಂವೀ ಅವರಿಂದ ರಚಿತವಾಗಿರುವ 'ಛಿಬ್ರಿಯಾ' ಕಾದಂಬರಿಯ ಆರಂಭಿಕ ಪುಟಗಳು ಇಲ್ಲಿವೆ. ಇದು ಕೇವಲ 'ಸಾಪ್ತಾಹಿಕ ಪ್ರಭ'ದಲ್ಲಿ ಮಾತ್ರ!**

• ಕುಂ.ವೀರಭದ್ರಪ್ಪ

ಆ ದಿವಸ ರಾಜ್ಯದ ಮಧ್ಯಮ ವರ್ಗದವರು ಕಾಲಕ್ಷೇಪಕ್ಕಾಗಿಯೂ, ಮೇಲ್ವರ್ಗದವರು ರಾಜಕೀಯ ಲಾಭ ಲುಕ್ಸಾನದ ದೃಷ್ಟಿಯಿಂದಲೂ, ಸ್ಥಳೀಯ ರಾಜಕಾರಣಿಗಳೂ, ಹಿರಿ ಕಿರಿಯ ಪುಡಾರಿಗಳೂ ತಮ್ಮ ಅಸ್ತಿತ್ವದ ಸಲುವಾಗಿಯೂ, ದುಡಿದುಣ್ಣುವ ಕೃಷಿಕಾರ್ಮಿಕರು ಮಧ್ಯಂತರ ಚುನಾವಣೆ ವಕ್ಕರಿಸಿದಲ್ಲಿ ಯಾವ್ಯಾವ ರಾಜಕೀಯ ಪಕ್ಷದಿಂದ ಎಷ್ಟೆಷ್ಟು ಕಮಾಯಿಸಬಹುದೆಂದು ಯೋಚಿಸುತ್ತಲೂ, ಸಣ್ಣಪುಟ್ಟ ರೈತರು ಯಾರು ಅಧಿಕಾರಕ್ಕೆ ಬಂದರೂ ತಾವು ಮಾತ್ರ ರಾಗಿ ಬೀಸೋದು ತಪ್ಪುವುದಿಲ್ಲವೆಂಬ ಉದಾಸೀನತೆಯಿಂದಲೂ ದೂರದ ದೆಹಲಿ ಕಡೆ ತಮ್ಮ ತಮ್ಮ ದೃಷ್ಟಿ ನೆಟ್ಟಿದ್ದರು.
ಕೆಲವು ದಿವಸಗಳಿಂದ ರಾಜ್ಯದ ರಾಜಕಾರಣ ನಭೂತೋ ನಭವಿಷ್ಯತಿ ಎಂಬಂತೆ ಕೆಟ್ಟು ಹೋಗಿದ್ದುದೇ ಅದಕ್ಕೆ ಕಾರಣ. ವಿಧಾನಸೌಧದ ಮೂಲೆಮುರುಕಟ್ಟುಗಳಲ್ಲಿದ್ದ ಜೇನ್ನೊಣಗಳಿಂದ ಕ್ರೂರ ಹಲ್ಲೆಗಳೊಳಗಾಗಿದ್ದರೂ ಆಡಳಿತ ಮತ್ತು ವಿರೋಧ ಪಕ್ಷದ ಶಾಸಕರು ಒಂಚೂರಾದರೂ ಬುದ್ಧಿ ಕಲಿತಿರಲಿಲ್ಲ. ತಮ್ಮ ದೇಹಗಳ ಹಲವು ಕಡೆ ಕಾಣಿ



ಸಿಕೊಂಡಿದ್ದ ಬೊಬ್ಬೆಗಳನ್ನೇ ಬಂಡವಾಳವನ್ನಾಗಿರಿಸಿಕೊಂಡು ಪರಸ್ಪರ ಕೆಸರೆರೆಚಾಟವನ್ನು ಮುಂದುವರೆಸಿದ್ದರು. ರಾಜ್ಯದಲ್ಲಿ ಅಸಂಖ್ಯಾತ ನೊಣಗಳನ್ನು ಸೃಷ್ಟಿಸುವುದರ ಮೂಲಕ ಸಾಂಕ್ರಾಮಿಕ ರೋಗಗಳನ್ನು ರತ್ನಗಂಬಳಿ ಹಾಸಿ ರಾಜ್ಯಕ್ಕೆ ಬರಮಾಡಿಕೊಳ್ಳಲು ಸಿದ್ಧತೆ ನಡೆಸಿದ್ದ ಸನ್ಮಾನ್ಯ ಮುಖ್ಯಮಂತ್ರಿಗಳೂ, ಅದಕ್ಕೆ ಪ್ರತಿಯಾಗಿ ತಾವೇನು ಕಡಿಮೆ ಎಂಬಂತೆ ಆಪರೇಷನ್ ಛಿಬ್ರಿಯಾ ಹೆಸರಿನ ಅಭಿಯಾನವನ್ನು ರಾಜ್ಯದಾದ್ಯಂತ ಹಮ್ಮಿಕೊಂಡಿದ್ದ ವಿರೋಧಪಕ್ಷದ ಧುರೀಣರೂ ಸಾಮಾಜಿಕ ನೆಮ್ಮದಿಯನ್ನು ಹದಗೆಡಿಸಿದ್ದರು. ಹೀಗಾಗಿ ರಾಜ್ಯದಲ್ಲಿ ಆಡಳಿತಾಂಗ ಸ್ಥಗಿತಗೊಂಡಿತ್ತು. ಎಲ್ಲಿ ನೋಡಿದರಲ್ಲಿ ಒನ್‌ಫಾರ್ಟಿಫೋರ್ ಸೆಕ್ಷನ್ನುಗಳ, ಕರ್ಫ್ಯೂಗಳ ಹಾವಳಿ, ಅವರನ್ನಿವರು, ಇವರನ್ನವರು ಬುಟ್ಟಿಯಲ್ಲಿ ಹಾಕಿಕೊಳ್ಳುವ ಸಲುವಾಗಿ ರೆಸಾರ್ಟ್ ರಾಜಕಾರಣ ಶುರುವಾಗಿತ್ತು. ಯಾವ್ಯಾವ ಶಾಸಕ ಎಷ್ಟೆಷ್ಟು ಕೋಟಿಗೆ ಹರಾಜಾದ ಎಂಬ ವದಂತಿಗಳು ಎಲ್ಲೆಂದರಲ್ಲಿ ಭೂತ ಕುಣಿತ ಆರಂಭಿಸಿದ್ದವು. ಆಡಳಿತಪಕ್ಷ ಜನರ ವಿಶ್ವಾಸ ಕಳೆದುಕೊಂಡಿದೆ ಎಂಬುದಾಗಿ ವಿರೋಧಪಕ್ಷದವರೂ, ನೊಣಗಳನ್ನು ಸಮರ್ಥಿಸಿದ ಲಾಗಾಯ್ತು ತಾವು ಹಿಂದೆಂದಿಗಿಂತ ಹೆಚ್ಚು ಬಲಿಷ್ಠರಾಗಿರುವುದಾಗಿ ಆಡಳಿತ ಪಕ್ಷದವರೂ ರಾಜಭವನಕ್ಕೆ ಹೋಗುವುದು ಘನತೆವೆತ್ತ ರಾಜ್ಯಪಾಲರ ತಲೆ ತಿನ್ನುವುದು ದಿನದಿಂದ ದಿನಕ್ಕೆ ಹೆಚ್ಚಿತ್ತು.
ಇದನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ ರಾಜ್ಯಪಾಲರು ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸ್ಸು ಮಾಡುವುದೋ ಮಾಡದೇ ಇರುವುದೋ ಅಧಿವೇಶನ ಕರೆದು ಬಹುಮತ ಸಾಬೀತು ಪಡಿಸಿ ಎಂದು ಕೇಳುವುದೋ ಕೇಳದೇ ಇರುವುದೋ ಸಂವಿಧಾನದ ಸಾಧಕ ಬಾಧಕಗಳೇನು ಯಾವ್ಯಾವ ನಿರ್ಧಾರ ತೆಗೆದುಕೊಂಡಲ್ಲಿ ತೆಗೆದುಕೊಳ್ಳದಿದ್ದಲ್ಲಿ ತಮ್ಮ ಪವಿತ್ರ ಹುದ್ದೆಗೆ ಯಾವ್ಯಾವ ರೀತಿಯ ಕಳಂಕ ಅಂಟಬಹುದೆಂಬ ಲೆಕ್ಕಾಚಾರದಲ್ಲಿ ಮುಳುಗಿದ್ದರು ಬೇರೆ! ಅವರನ್ನು ತಮ್ಮ ಪರವಾಗಿ ಮಣಿಸುವ ಸಲುವಾಗಿ ಆಡಳಿತ ಮತ್ತು ವಿರೋಧಪಕ್ಷಗಳ ಮುಖಂಡರು ರಾಜಭವನದ ಹಾದಿಯನ್ನು ಸವೆಸಿ ನುಣುಪು ಮಾಡಲಾರಂಭಿಸಿದ್ದರು. ಆದರೂ ರಾಜ್ಯಪಾಲರ ದಿವ್ಯಮೌನ ಎಲ್ಲರಿಗೂ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು.
ಅವರ ಮನಸ್ಸನ್ನು ತಮ್ಮ ಪರ ಪರಿವರ್ತಿಸುವ ಸಲುವಾಗಿ ಧುರೀಣರ ಪೈಕಿ ಕೆಲವರು ಮಲೆಯಾಳಿ ಮಾಂತ್ರಿಕರ, ಇನ್ನೂ ಕೆಲವರು ತಮಿಳ್ನಾಡಿನ ಮಾಂತ್ರಿಕರ, ವಾಮಾಚಾರಿಗಳ ನೆರವು ಪಡೆದರಾದರೂ ಪ್ರಯೋಜನವಾಗಲಿಲ್ಲ.

3ನೇ ಪುಟಕ್ಕೆ